ದೂರವಾಣಿ ಸಂ. : 080 2956 2046

# ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೋಲಿಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561203.

## "ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದನೆ ಪತ್ರ"

ವಿಷಯ : ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಹೆಸರಘಟ್ಟ - 2 ಹೋಬಳಿ, ಅದ್ದೆವಿಶ್ವನಾಥಪುರ ಗ್ರಾಮದ ಸರ್ವೆ ನಂ. 103/2 ರ ಪೈಕಿ 1ಎ-01ಗು, 103/4 ರ ಪೈಕಿ 1ಎ-12ಗು, 103/6 ರಲ್ಲಿ 0ಎ-08.50ಗು, 103/7 ರಲ್ಲಿ 0ಎ-12ಗು, 103/8 ರ ಪೈಕಿ 0ಎ-2.50ಗು, 103/9 (ಹ.ಸ.ನಂ.103/6) ರಲ್ಲಿ 0ಎ-8.50ಗು, 104/2 (ಹ.ಸ.ನಂ.104) ರಲ್ಲಿ 1ಎ-34ಗು (00-06ಗುಂಟೆ 'ಬಿ' ಖರಾಬು ಹೊರತುಪಡಿಸಿ), 105/1 ರಲ್ಲಿ 0ಎ-25ಗು, 105/2 ರ ಪೈಕಿ 0ಎ-26ಗು ಮತ್ತು 105/7 (ಹ.ಸ.ನಂ.105/3) ರ ಪೈಕಿ 0ಎ-25ಗು ಒಟ್ಟು 6ಎಕರೆ 34.50ಗುಂಟೆ ಅಥವಾ 27771.17 ಚ.ಮೀ ವಿಸ್ತೀರ್ಣದ 'ವಸತಿ' ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಲು ಕೋರಿರುವ ಬಗ್ಗೆ.

ಉಲ್ಲೇಖ :

1) ಅರ್ಜಿದಾರರಾದ ಶ್ರೀ ಮಾರೇಗೌಡ ಬಿನ್ ಗೋವಿಂದಪ್ಪ, ಶ್ರೀಮತಿ ಕೋಮಲಕೃಷ್ಣರೆಡ್ಡಿ ಕೋಂ ಕೃಷ್ಣಾರೆಡ್ಡಿ, ಶ್ರೀ ಮಂಜುನಾಥ ಬಿನ್ ಮಾರೇಗೌಡ, ಶ್ರೀ ಎ.ಎಂ. ನಾಗರಾಜ್ ಬಿನ್ ಮಾರೇಗೌಡ ಮತ್ತು ಇತರರು ಜಂಟಿಯಾಗಿ ಸಲ್ಲಿಸಿರುವ ಅರ್ಜಿ ದಿ:08/03/2023.
2) ಸರ್ಕಾರದ ಆದೇಶ ಸಂ. ನಅಇ 47 ಬಿಎಂಆರ್ 2022 ಬೆಂಗಳೂರು, ದಿ:23/05/2022 ಹಾಗೂ ನಅಇ 291 ಬಿಎಂಆರ್ 2022, ಬೆಂಗಳೂರು, ದಿ:12/01/2023.
3) ಭೂ ಉಪಯೋಗ ಬದಲಾವಣೆ ಆದೇಶಗಳ ಸಂಖ್ಯೆ: DPA/TP/CLU/12/2021-22/227 ದಿನಾಂಕ: 01/06/2022 ಹಾಗೂ DPA/TP/CLU/13/2022-23/1535 ದಿನಾಂಕ: 04/03/2023.
4) ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರಗಳ ಸಂಖ್ಯೆ: 409311 ದಿನಾಂಕ: 21/01/2023 (ಸ.ನಂ. 103/6), 425822 ದಿನಾಂಕ: 21/02/2023 (ಸ.ನಂ. 103/7), 409314 ದಿನಾಂಕ: 25/01/2023 (ಸ.ನಂ. 103/9), 349181 ದಿನಾಂಕ: 12/08/2022 (ಸ.ನಂ. 104/2).
5) ದಿನಾಂಕ:10/03/2023 ರಂದು ನಡೆದ ಪ್ರಾಧಿಕಾರದ 24ನೇ ಸಭೆಯ ವಿಷಯ ಸಂ. 24.44 ರ ನಡಾವಳಿ.
6) ಈ ಪ್ರಾಧಿಕಾರದ ಶುಲ್ಕ ಪಾವತಿ ಸೂಚನಾ ಪತ್ರ ದಿನಾಂಕ: 03/04/2023.
7) ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರಗಳ ಸಂಖ್ಯೆ: 432953 ದಿನಾಂಕ: 03/04/2023 (ಸ.ನಂ. 103/2), 482318 ದಿನಾಂಕ: 30/06/2023 (ಸ.ನಂ. 103/4), 474256 ದಿನಾಂಕ: 20/03/2023 (ಸ.ನಂ. 103/8), 474242 ದಿನಾಂಕ: 20/03/2023 (ಸ.ನಂ. 105/1), 474220 ದಿನಾಂಕ: 20/03/2023 (ಸ.ನಂ. 105/2), 482308 ದಿನಾಂಕ: 20/03/2023 (ಸ.ನಂ. 105/7).
8) ಅರ್ಜಿದಾರರ ಮನವಿ ಪತ್ರ ದಿನಾಂಕ: 06/09/2023.
9) ಅರ್ಜಿದಾರರು ಶುಲ್ಕಗಳನ್ನು ಪಾವತಿಸಿದ ರಶೀದಿ ಸಂಖ್ಯೆ: 1848 ದಿನಾಂಕ: 10/10/2023 ರಂತೆ ರೂ. 15,61,500/- ಒಟ್ಟು ರೂ. (ಹದಿನೈದು ಲಕ್ಷದ ಅರವತ್ತೊಂದು ಸಾವಿರದ ಐದು ನೂರು ರೂಪಾಯಿಗಳು ಮಾತ್ರ) ರಂತೆ ಶುಲ್ಕಗಳನ್ನು ಪಾವತಿಸಿರುತ್ತಾರೆ.
10) ಈ ಪ್ರಾಧಿಕಾರದ ಸಮ ಸಂಖ್ಯೆಯ ಪತ್ರ ದಿನಾಂಕ: 26/10/2023.
11) ಅರ್ಜಿದಾರರು ಶುಲ್ಕಗಳನ್ನು ಪಾವತಿಸಿದ ರಶೀದಿ ಸಂಖ್ಯೆ 1877 ದಿನಾಂಕ: 04/11/2023 ರಲ್ಲಿ ಒಟ್ಟು ರೂ. 73,800/- (ಎಪ್ಪತ್ಮೂರು ಸಾವಿರದ ಎಂಟು ನೂರು ರೂಪಾಯಿಗಳು ಮಾತ್ರ) ರಂತೆ ಶುಲ್ಕಗಳನ್ನು ಪಾವತಿಸಿರುತ್ತಾರೆ.

12) ವಸತಿ ಉದ್ದೇಶದ ಅಭಿವೃದ್ಧಿ ಯೋಜನೆ ನಕ್ಷೆಯಲ್ಲಿ ರಸ್ತೆ ಅಗಲೀಕರಣಕ್ಕಾಗಿ ಕಾಯ್ದಿರಿಸಲಾಗಿರುವ 165.41 ಚ.ಮೀ. ಜಾಗವನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ರಾಜಾನುಕುಂಟೆ ಗ್ರಾಮ ಪಂಚಾಯಿತಿ ರವರಿಗೆ ಹಾಗೂ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ಉದ್ಯಾನವನ ಮತ್ತು ಬಯಲುಜಾಗೆಗಾಗಿ ಕಾಯ್ದಿರಿಸಲಾಗಿರುವ 2788.57 ಚ.ಮೀ. ಜಾಗವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಲು ಸೂಚಿಸಿರುವ ಪತ್ರ ದಿನಾಂಕ: 04/11/2023.

13) ಹಿರಿಯ ಉಪನೋಂದಣಾಧಿಕಾರಿಗಳು, ಬ್ಯಾಟರಾಯನಪುರ ರವರ ಕಛೇರಿಯ 1ನೇ ಪುಸ್ತಕದ ದಸ್ತಾವೇಜು ನಂಬರ್ BYP-1-13137-2023-24 ಆಗಿ ದಿನಾಂಕ: 15/12/2023.

14) ಹಿರಿಯ ಉಪನೋಂದಣಾಧಿಕಾರಿಗಳು, ಬ್ಯಾಟರಾಯನಪುರ ರವರ ಕಛೇರಿಯ 1ನೇ ಪುಸ್ತಕದ ದಸ್ತಾವೇಜು ನಂಬರ್ BYP-1-13138-2023-24 ಆಗಿ ದಿನಾಂಕ: 15/12/2023.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಮಾರೇಗೌಡ ಬಿನ್ ಗೋವಿಂದಪ್ಪ, ಶ್ರೀ ಸುನೀಲ್‌ಸುರೇಶ್ ಬಿನ್ ಕೆ.ಸುರೇಶ್, ಶ್ರೀಮತಿ ಕೋಮಲಕೃಷ್ಣರೆಡ್ಡಿ ಕೊಂ ಕೃಷ್ಣಾರೆಡ್ಡಿ, ಶ್ರೀ ಮಂಜುನಾಥ ಬಿನ್ ಮಾರೇಗೌಡ, ಶ್ರೀ ಎ.ಎಂ. ನಾಗರಾಜ್ ಬಿನ್ ಮಾರೇಗೌಡ, ಶ್ರೀ ಅರಸಮ್ಮ ಬಿನ್ ಲೇಟ್॥ ಚಿಕ್ಕಹನುಮಕ್ಕ ಬೈಲಪ್ಪ, ಶ್ರೀ ರಾಜಣ್ಣ ಬಿನ್ ಲೇಟ್॥ ಚಿಕ್ಕಹನುಮಕ್ಕ ಬೈಲಪ್ಪ, ಶ್ರೀ ಗೋಪಾಲ್ ಬಿನ್ ಲೇಟ್॥ ಚಿಕ್ಕಹನುಮಕ್ಕ ಬೈಲಪ್ಪ, ಶ್ರೀಮತಿ ಕೋಮಲಕೃಷ್ಣಾರೆಡ್ಡಿ ಕೋಂ ಕೃಷ್ಣಾರೆಡ್ಡಿ, ಶ್ರೀ ಕೃಷ್ಣಾರೆಡ್ಡಿ ಬಿನ್ ಲೇಟ್॥ ಮುನಿಶಾಮಿರೆಡ್ಡಿ, ಶ್ರೀ ಭಾರ್ಗವರಾಜು ದೊಮ್ಮರಾಜು ಬಿನ್ ರಾಮಭದ್ರರಾಜು, ಶ್ರೀ ಎಸ್. ಮಹೇಶ್‌ಕುಮಾರ್‌ರೆಡ್ಡಿ ಬಿನ್ ಎಸ್. ರೆಡ್ಡಪ್ಪರೆಡ್ಡಿ, ಶ್ರೀ ಕೊಂಡಸಾನಿ ಗಿರೀಶ್‌ಕುಮಾರ್‌ರೆಡ್ಡಿ ಬಿನ್ ಕೊಂಡಸಾನಿ ಮದನ್‌ಮೋಹನ್‌ರೆಡ್ಡಿ ರವರುಗಳು ಉಲ್ಲೇಖ (1) ರಂತೆ ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಹೆಸರಘಟ್ಟ – 2 ಹೋಬಳಿ, ಅದ್ದೆವಿಶ್ವನಾಥಪುರ ಗ್ರಾಮದ ಸರ್ವೆ ನಂ. 103/2 ರ ಪೈಕಿ 1ಎ–01ಗು, 103/4 ರ ಪೈಕಿ 1ಎ–12ಗು, 103/6 ರಲ್ಲಿ 0ಎ–08.50ಗು, 103/7 ರಲ್ಲಿ 0ಎ–12ಗು, 103/8 ರ ಪೈಕಿ 0ಎ–2.50ಗು, 103/9 (ಹ.ಸ.ನಂ.103/6) ರಲ್ಲಿ 0ಎ–8.50ಗು, 104/2 (ಹ.ಸ.ನಂ.104) ರಲ್ಲಿ 1ಎ–34ಗು (00–06ಗುಂಟೆ 'ಬಿ' ಖರಾಬು ಹೊರತುಪಡಿಸಿ), 105/1 ರಲ್ಲಿ 0ಎ–25ಗು, 105/2 ರ ಪೈಕಿ 0ಎ–26ಗು ಮತ್ತು 105/7 (ಹ.ಸ.ನಂ.105/3) ರ ಪೈಕಿ 0ಎ–25ಗು ಒಟ್ಟು 6ಎಕರೆ 34.50ಗುಂಟೆ ಅಥವಾ 27771.17 ಚ.ಮೀ ವಿಸ್ತೀರ್ಣ ಪ್ರದೇಶಕ್ಕೆ ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಲು ಕೋರಿರುತ್ತಾರೆ.

ಪ್ರಶ್ನಿತ ಜಮೀನುಗಳು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/95/ಬಿಎಂಆರ್/2016 ದಿನಾಂಕ:30–11–2017 ರನ್ವಯ ದೊಡ್ಡಬಳ್ಳಾಪುರ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಸೇರಲ್ಪಟ್ಟಿದ್ದು, ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/157/ಬಿಎಂಆರ್/2005 ದಿನಾಂಕ: 27–01–2009 ಮತ್ತು ತಿದ್ದುಪಡಿ ಆದೇಶ ದಿನಾಂಕ:29–01–2009 ರನ್ವಯ ಅನುಮೋದಿಸಲ್ಪಟ್ಟ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಮಹಾಯೋಜನೆಯಲ್ಲಿ ಪ್ರಶ್ನಿತ ಜಮೀನುಗಳು 'ವ್ಯವಸಾಯ' ಭೂ ಉಪಯೋಗ ವಲಯದಲ್ಲಿರುತ್ತದೆ. ಉಲ್ಲೇಖ (2) ರ ಸರ್ಕಾರದ ಆದೇಶಗಳಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರಡಿಯಲ್ಲಿ ಪ್ರಸ್ತಾಪಿತ ಜಮೀನುಗಳು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆಯಾಗಿರುತ್ತದೆ. ಅದರನ್ವಯ ಉಲ್ಲೇಖ (3) ರಂತೆ ಈ ಪ್ರಾಧಿಕಾರದಿಂದ ಭೂ ಉಪಯೋಗ ಬದಲಾವಣೆಗೆ ಸಂಬಂಧಿಸಿದಂತೆ ಆದೇಶ ಪತ್ರಗಳನ್ನು ನೀಡಲಾಗಿರುತ್ತದೆ. ಉಲ್ಲೇಖ (4) ರ ಅಧಿಕೃತ ಜ್ಞಾಪನ ಪತ್ರಗಳಂತೆ ಸ.ನಂ. 103/6, 103/7, 103/9 ಮತ್ತು 104/2 ರ ಜಮೀನುಗಳು ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರಿಂದ ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುತ್ತದೆ.

ದೂರವಾಣಿ ಸಂ. : 080 2956 2046

# ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೋಲಿಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561203.

ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದನೆ ನೀಡುವ ಸಂಬಂಧ ಉಲ್ಲೇಖ (5) ರಲ್ಲಿನ ದಿನಾಂಕ: 10/03/2023 ರಂದು ನಡೆದ ಪ್ರಾಧಿಕಾರದ 24ನೇ ಸಭೆಯ ವಿಷಯ ಸಂಖ್ಯೆ: 24.44 ರ ನಡಾವಳಿಯಲ್ಲಿ ಅರ್ಜಿದಾರರು ಸಲ್ಲಿಸಿರುವ ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಯನ್ನು ವಲಯ ನಿಯಮಾವಳಿಗಳಿಗೆ ಅನುಗುಣವಾಗಿ ತಿದ್ದುಪಡಿ ಅಳವಡಿಸಿಕೊಂಡು ಹಾಗೂ ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆ ಮಂಜೂರಾತಿ ಪೂರ್ವದಲ್ಲಿ ಸರ್ವೆ ನಂ. 103/2, 103/4, 103/8, 105/1, 105/2 ಮತ್ತು 105/7 ರ ಜಮೀನುಗಳ ಭೂ ಪರಿವರ್ತನಾ ಆದೇಶಗಳನ್ನು ಪಡೆದುಕೊಳ್ಳುವ ಷರತ್ತಿಗೊಳಪಡಿಸಿ ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಹೆಸರಘಟ್ಟ – 2 ಹೋಬಳಿ, ಅದ್ದೆವಿಶ್ವನಾಥಪುರ ಗ್ರಾಮದ ಸರ್ವೆ ನಂ. 103/2 ರ ಪೈಕಿ 1ಎ–01ಗು, 103/4 ರ ಪೈಕಿ 1ಎ–12ಗು, 103/6 ರಲ್ಲಿ 0ಎ–08.50ಗು, 103/7 ರಲ್ಲಿ 0ಎ–12ಗು, 103/8 ರ ಪೈಕಿ 0ಎ–2.50ಗು, 103/9 (ಹ.ಸ.ನಂ.103/6) ರಲ್ಲಿ 0ಎ–8.50ಗು, 104/2 (ಹ.ಸ.ನಂ.104) ರಲ್ಲಿ 1ಎ–34ಗು (00–06ಗುಂಟೆ 'ಬಿ' ಖರಾಬು ಹೊರತುಪಡಿಸಿ), 105/1 ರ ಪೈಕಿ 0ಎ–25ಗು, 105/2 ರ ಪೈಕಿ 0ಎ–26ಗು ಮತ್ತು 105/7 (ಹ.ಸ.ನಂ.105/3) ರಲ್ಲಿ 0ಎ–25ಗು ಒಟ್ಟು 6ಎಕರೆ 34.50ಗುಂಟೆ ಅಥವಾ 27771.17 ಚ.ಮೀ ವಿಸ್ತೀರ್ಣ ಪ್ರದೇಶಕ್ಕೆ 'ವಸತಿ' ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಯನ್ನು ಷರತ್ತುಗಳಿಗೆ ಒಳಪಡಿಸಿ ಅನುಮೋದನೆ ನೀಡಲು ತೀರ್ಮಾನಿಸಲಾಗಿರುತ್ತದೆ.

ಪ್ರಾಧಿಕಾರದ ಸಭೆಯ ನಡಾವಳಿಯ ರೀತ್ಯ ಉಲ್ಲೇಖ (6) ರ ಪ್ರಾಧಿಕಾರದ ಶುಲ್ಕ ಪಾವತಿ ಸೂಚನಾ ಪತ್ರದಲ್ಲಿ ನಿಗಧಿತ ಶುಲ್ಕಗಳನ್ನು ಪಾವತಿಸಲು ಹಾಗೂ ಪ್ರಸ್ತಾಪಿತ ಜಮೀನುಗಳ ಪೈಕಿ ಸರ್ವೆ ನಂ. 103/2, 103/4, 103/8, 105/1, 105/2 ಮತ್ತು 105/7 ರ ಜಮೀನುಗಳ ಭೂ ಪರಿವರ್ತನಾ ಆದೇಶಗಳನ್ನು ಮತ್ತು ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ಅರ್ಜಿದಾರರಿಗೆ ತಿಳಿಸಿರುವ ಹಿನ್ನೆಲೆಯಲ್ಲಿ ಉಲ್ಲೇಖ (7) ರಂತೆ ಸ.ನಂ. 103/2, 103/4, 103/8, 105/1, 105/2 ಮತ್ತು 105/7 ರ ಜಮೀನುಗಳಿಗೆ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರು ಹೊರಡಿಸಿರುವ ಭೂ ಪರಿವರ್ತನಾ ಆದೇಶಗಳನ್ನು ಸಲ್ಲಿಸಿರುತ್ತಾರೆ ಹಾಗೂ ಉಲ್ಲೇಖ (8) ರ ಮನವಿ ಪತ್ರದಲ್ಲಿ ಅರ್ಜಿದಾರರು ಪ್ರಸ್ತಾವನೆಯಲ್ಲಿ ಸರ್ವೆ ನಂ. 103/4 ರಲ್ಲಿ 1ಎ–12ಗು ವಿಸ್ತೀರ್ಣದ ಜಮೀನಿಗೆ ಕ್ರಯಪತ್ರದ ಮೂಲಕ ಮಾಲೀಕತ್ವ ಬದಲಾವಣೆಯಾಗಿದ್ದು, ಶ್ರೀಮತಿ ಪ್ರಸನ್ನಲಕ್ಷ್ಮಿ ಯರಟಪಲ್ಲಿ ರವರು ಹಾಗೂ ಸರ್ವೆ ನಂ. 103/9 ರಲ್ಲಿ 0–08.5ಗುಂಟೆ ವಿಸ್ತೀರ್ಣದ ಜಮೀನಿಗೆ ಶ್ರೀ ಶಿವಕುಮಾರರೆಡ್ಡಿ ವೈ. ರವರಿಗೆ ಕ್ರಯಪತ್ರದ ಮೂಲಕ ಮಾಲೀಕತ್ವ ಬದಲಾವಣೆಯಾಗಿದ್ದು, ಸರ್ವೆ ನಂ. 103/4 ಮತ್ತು 103/9 ರ ಜಮೀನುಗಳಿಗೆ ಶ್ರೀಮತಿ ಪ್ರಸನ್ನಲಕ್ಷ್ಮಿ ಯರಟಪಲ್ಲಿ ಮತ್ತು ಶ್ರೀ ಶಿವಕುಮಾರರೆಡ್ಡಿ ವೈ. ರವರುಗಳನ್ನು ಮಾಲೀಕರನ್ನಾಗಿ ಪರಿಗಣಿಸಿ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದನೆ ನೀಡಲು ಕೋರಿರುತ್ತಾರೆ. ಉಲ್ಲೇಖ (9) ರಂತೆ ಅರ್ಜಿದಾರರು ನಿಗಧಿತ ಅವಧಿ ನಂತರ ಶುಲ್ಕಗಳನ್ನು ಪಾವತಿಸಿದ್ದು, ಉಲ್ಲೇಖ (10) ರ ಶುಲ್ಕ ಪಾವತಿ ಸೂಚನಾ ಪತ್ರದಲ್ಲಿ ದಂಡ ಶುಲ್ಕವನ್ನು ಪಾವತಿಸಲು ಅರ್ಜಿದಾರರಿಗೆ ತಿಳಿಸಲಾಗಿರುತ್ತದೆ. ಉಲ್ಲೇಖ (11) ರಂತೆ ಅರ್ಜಿದಾರರು ದಂಡ ಶುಲ್ಕವನ್ನು ಪಾವತಿಸಿರುತ್ತಾರೆ.

ಉಲ್ಲೇಖ (12) ರ ಯೋಜನಾ ಪ್ರಾಧಿಕಾರದ ಪತ್ರದಲ್ಲಿ ವಸತಿ ಉದ್ದೇಶದ ಅಭಿವೃದ್ಧಿ ಯೋಜನೆ ನಕ್ಷೆಯಲ್ಲಿ ಸರ್ವೆ ನಂ. 104/2 ರ ಜಮೀನಿನಲ್ಲಿ ಹಾದುಹೋಗಿರುವ ಹಾಲಿ 9.00 ಮೀಟರ್ ಅಗಲದ ರಸ್ತೆಯನ್ನು 12.0 ಮೀಟರ್ ಅಗಲಕ್ಕೆ ವಿಸ್ತರಿಸಲು ರಸ್ತೆ ಅಗಲೀಕರಣಕ್ಕಾಗಿ ಕಾಯ್ದಿರಿಸಲಾಗಿರುವ 165.41 ಚ.ಮೀ. ಜಾಗವನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ರಾಜಾನುಕುಂಟೆ ಗ್ರಾಮ ಪಂಚಾಯಿತಿ ರವರಿಗೆ ಹಾಗೂ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ಉದ್ಯಾನವನ ಮತ್ತು ಬಯಲುಜಾಗೆಗಾಗಿ ಕಾಯ್ದಿರಿಸಲಾಗಿರುವ 2788.57 ಚ.ಮೀ. ಜಾಗವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಲು ತಿಳಿಸಲಾಗಿದ್ದು, ಅರ್ಜಿದಾರರು ಉಲ್ಲೇಖ (13) ಮತ್ತು (14) ರಂತೆ ವಸತಿ ಉದ್ದೇಶದ ಅಭಿವೃದ್ಧಿ ಯೋಜನೆ ನಕ್ಷೆಯಲ್ಲಿ ಸರ್ವೆ ನಂ. 104/2 ರ ಜಮೀನಿನಲ್ಲಿ ಹಾದುಹೋಗಿರುವ ಹಾಲಿ 9.00 ಮೀಟರ್ ಅಗಲದ ರಸ್ತೆಯನ್ನು 12.0 ಮೀಟರ್ ಅಗಲಕ್ಕೆ ವಿಸ್ತರಿಸಲು ರಸ್ತೆ ಅಗಲೀಕರಣಕ್ಕಾಗಿ ಕಾಯ್ದಿರಿಸಲಾಗಿರುವ 165.41 ಚ.ಮೀ. ಜಾಗವನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ರಾಜಾನುಕುಂಟೆ



E-mail :dpa.dbpura2018@gmail.com Website : www.doddaballapur.tpa.gov.in

ಗ್ರಾಮ ಪಂಚಾಯಿತಿ ರವರಿಗೆ ಹಾಗೂ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ಉದ್ಯಾನವನ ಮತ್ತು ಬಯಲುಜಾಗೆಗಾಗಿ ಕಾಯ್ದಿರಿಸಲಾಗಿರುವ 2788.57 ಚ.ಮೀ. ಜಾಗವನ್ನು ಪ್ರಾಧಿಕಾರಕ್ಕೆ ನೋಂದಾಯಿಸಿರುವ ಬಗ್ಗೆ ನೋಂದಾಯಿತ ಪರಿತ್ಯಾಜನಾ ಪತ್ರಗಳ ಪ್ರತಿಯನ್ನು ಸಲ್ಲಿಸಿರುತ್ತಾರೆ ಹಾಗೂ ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಯ ನೀಲಿ ಪ್ರತಿಗಳನ್ನು ಸಲ್ಲಿಸಿ, ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಮೇಲ್ಕಂಡ ಅಂಶಗಳನ್ವಯ ಸದರಿ ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡುವ ಸಂಬಂಧ ಕೆಳಕಂಡಂತೆ ಆದೇಶಿಸಿದೆ.

## ಆದೇಶ

**ಸಂ. DPA/TP/DP/05/2022-23**/1338 ದಿನಾಂಕ: 18 DEC 2023

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ದಿನಾಂಕ: 10/03/2023 ರಂದು ನಡೆದ ಪ್ರಾಧಿಕಾರದ 24ನೇ ಸಭೆಯ ವಿಷಯ ಸಂಖ್ಯೆ: 24.44 ರ ನಡಾವಳಿಯ ರೀತ್ಯ, ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಹೆಸರಘಟ್ಟ – 2 ಹೋಬಳಿ, ಅದ್ದೆವಿಶ್ವನಾಥಪುರ ಗ್ರಾಮದ ಸರ್ವೆ ನಂ. 103/2 ರ ಪೈಕಿ 1ಎ–01ಗು, 103/4 ರ ಪೈಕಿ 1ಎ–12ಗು, 103/6 ರಲ್ಲಿ 0ಎ–08.50ಗು, 103/7 ರಲ್ಲಿ 0ಎ–12ಗು, 103/8 ರ ಪೈಕಿ 0ಎ–2.50ಗು, 103/9 (ಹ.ಸ.ನಂ.103/6) ರಲ್ಲಿ 0ಎ–8.50ಗು, 104/2 (ಹ.ಸ.ನಂ.104) ರಲ್ಲಿ 1ಎ–34ಗು (00–06ಗುಂಟೆ 'ಬಿ' ಖರಾಬು ಹೊರತುಪಡಿಸಿ), 105/1 ರಲ್ಲಿ 0ಎ–25ಗು, 105/2 ರ ಪೈಕಿ 0ಎ–26ಗು ಮತ್ತು 105/7 (ಹ.ಸ.ನಂ.105/3) ರ ಪೈಕಿ 0ಎ–25ಗು ಒಟ್ಟು 6ಎಕರೆ 34.50ಗುಂಟೆ ಅಥವಾ 27771.17 ಚ.ಮೀ ವಿಸ್ತೀರ್ಣ ಪ್ರದೇಶಕ್ಕೆ "ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆ" ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಪ್ರಕರಣ 15 ರನ್ವಯ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದಿಸಿದೆ.

ಷರತ್ತುಗಳು:

1) ಪ್ರಾಧಿಕಾರಕ್ಕೆ ಸಂಬಂಧಪಟ್ಟ ಶುಲ್ಕಗಳನ್ನು ಪಾವತಿಸುವುದು.
2) ಕುಡಿಯುವ ನೀರು ಹಾಗೂ ತ್ಯಾಜ್ಯ ನೀರು ವಿಲೇವಾರಿ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಅರ್ಜಿದಾರರೇ ಕಲ್ಪಿಸುವುದು. ಕುಡಿಯುವ ನೀರು ಪೂರೈಕೆ ಬಗ್ಗೆ ಅರ್ಜಿದಾರರು ಖಾತ್ರಿಪಡಿಸುವುದು.
3) ವಸತಿ ಉಪಯೋಗದ ಅಭಿವೃದ್ಧಿ ಯೋಜನೆಯಲ್ಲಿ ಅರ್ಜಿದಾರರು ಕಡ್ಡಾಯವಾಗಿ ಮಳೆನೀರು ಕೊಯ್ಲಿಗೆ ಸಂಬಂಧಿಸಿದಂತೆ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ಉದ್ದೇಶಿತ ಒಟ್ಟು ಕ್ಷೇತ್ರದಲ್ಲಿ ಬೀಳುವ ಮಳೆನೀರು ವ್ಯರ್ಥವಾಗಿ ಹೊರಗೆ ಹೋಗದಂತೆ ಉದ್ದೇಶಿತ ಜಮೀನುಗಳಲ್ಲಿ ಭೂಮಿಯ ಒಳಗಡೆ ಇಂಗುವಂತೆ ಮಾಡಲು ವಿನ್ಯಾಸವನ್ನು ಸಿದ್ಧಪಡಿಸಿ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ತೋರಿಸತಕ್ಕದ್ದು.
4) ಪ್ರಾಧಿಕಾರವು ಅನುಮೋದಿಸಿರುವ ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಯಂತೆಯೇ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತ ಮಾಡುವುದು. ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆ ಮಾಡುವಂತಿಲ್ಲ.
5) ಉದ್ಯಾನವನ ಮತ್ತು ಬಯಲು ಜಾಗಗಳನ್ನು ಹಾಗೂ ಸಿ.ಎ. ಜಾಗಗಳನ್ನು ಅನುಮೋದಿತ ನಕ್ಷೆ ಪ್ರಕಾರ ಅಭಿವೃದ್ಧಿಪಡಿಸುವುದು.
6) ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ವಿವಿಧ ಜಾತಿಯ ಗಿಡಮರಗಳನ್ನು ಬೆಳೆಸಿ ಅಭಿವೃದ್ಧಿಪಡಿಸುವುದು.
7) ಪ್ರಶ್ನಿತ ಪ್ರದೇಶದಲ್ಲಿ ಕಟ್ಟಡ ನಿರ್ಮಿಸುವ ಮೊದಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ (15) ರಡಿಯಲ್ಲಿ ಸಂಬಂಧಪಟ್ಟ ಯೋಜನಾ ಪ್ರಾಧಿಕಾರದಿಂದ ಕಟ್ಟಡ ನಕ್ಷೆಗಳಿಗೆ ಅನುಮೋದನೆ ಪಡೆಯತಕ್ಕದ್ದು.

ದೂರವಾಣಿ ಸಂ. : 080 2956 2046

# ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ

ಎಸ್.ಎನ್. ಕಾಂಪ್ಲೆಕ್ಸ್, ಮೊದಲನೇ ಮಹಡಿ, ನಗರ ಪೋಲಿಸ್ ಠಾಣೆ ಎದುರು, 'ಡಿ' ಕ್ರಾಸ್, ದೊಡ್ಡಬಳ್ಳಾಪುರ-561203.

8) ಕಟ್ಟಡ ಕಾಮಗಾರಿ ಪ್ರಾರಂಭವಾದ ನಂತರ ಕಟ್ಟಡ ಸುರಕ್ಷತೆಯ ಬಗ್ಗೆ ಸಂಬಂಧಿಸಿದ ಸಕ್ಷಮ ಪ್ರಾಧಿಕಾರದ ಪರಿಶೀಲಿಸಿಕೊಳ್ಳತಕ್ಕದ್ದು.

9) ವಲಯ ನಿಯಮಾವಳಿಯಂತೆ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ನಮೂದಿಸಿರುವ ಉದ್ದೇಶಿತ ಕಟ್ಟಡಗಳ ಬ್ಲಾಕ್‌ಗಳು, ಉಪಗಮನ ರಸ್ತೆ, ಹೈವೇಗಳು, ಉದ್ಯಾನವನ ಮತ್ತು ಖಾಲಿ ಜಾಗಗಳು, ನಾಗರೀಕ ಸೌಕರ್ಯ ಜಾಗಗಳನ್ನು ನಿಗದಿಪಡಿಸಿರುವ ನಕ್ಷೆಯಾಗಿದ್ದು ಎಲ್ಲಾ ಅಗತ್ಯ ನಿರಾಕ್ಷೇಪಣಾ ಪತ್ರಗಳನ್ನು ಕಟ್ಟಡ ನಕ್ಷೆ ಅನುಮೋದಿಸುವ ಸಂದರ್ಭದಲ್ಲಿ ಸಲ್ಲಿಸತಕ್ಕದ್ದು.

10) ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ-2016 ರ ಕಲಂ (3) ಮತ್ತು (4) ರ ರೀತ್ಯ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (RERA) ದಲ್ಲಿ ವಸತಿ ಯೋಜನೆಯ ಪೂರ್ವಭಾವಿ ನೋಂದಣಿಯನ್ನು ಕಡ್ಡಾಯವಾಗಿ ಮಾಡತಕ್ಕದ್ದು.

11) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ water (Prevention and Control of Pollution) Act 1974 ರ ಕಲಂ 25 ರ ರೀತ್ಯ ಸೂಕ್ತ ಪ್ರಮಾಣದ Sewage Treatment Plant (ತ್ಯಾಜ್ಯನೀರು ಸಂಸ್ಕರಣಾ ಘಟಕ) ಸ್ಥಾಪಿಸಲು Consent for Establishment ಪೂರ್ವಾನುಮತಿ ಪಡೆಯದೇ ಪ್ರಶ್ನಿತ ನಿವೇಶನ / ಜಾಗದಲ್ಲಿ ನೆಲ ಅಗಿಯುವಿಕೆ ಒಳಗೊಂಡಂತೆ ಯಾವುದೇ ರೀತಿಯ ಕಟ್ಟಡ ನಿರ್ಮಾಣ ಅಥವಾ ವಸತಿ ವಿನ್ಯಾಸ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದಲ್ಲ. ಉದ್ದೇಶಿತ ಕಟ್ಟಡ / ನೆಲ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಮುನ್ನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ Consent for Establishment ಅನುಮತಿ ಪಡೆಯತಕ್ಕದ್ದು.

12) ಪ್ರಸ್ತಾವಿತ ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆಯಲ್ಲಿ ಬರುವ ವಸತಿ ಘಟಕಗಳಿಗೆ ನೀರು ಸರಬರಾಜು, STP/ಸೆಪ್ಟಿಕ್ ಟ್ಯಾಂಕ್ ಮುಂತಾದ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿದಾರರು ಒದಗಿಸತಕ್ಕದ್ದು.

13) ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಪೂರ್ವದಲ್ಲಿ ಅಗತ್ಯ ಅಭಿವೃದ್ಧಿ ಶುಲ್ಕವನ್ನು ಯೋಜನಾ ಪ್ರಾಧಿಕಾರಕ್ಕೆ/ಸ್ಥಳೀಯ ಸಂಸ್ಥೆಗೆ ಪಾವತಿಸತಕ್ಕದ್ದು.

14) ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರವು ಮುಂದೆ ಸೂಚಿಸಬಹುದಾದ ಎಲ್ಲಾ ತಾಂತ್ರಿಕ ವಿಷಯಗಳಿಗೆ ಹಾಗೂ ಶುಲ್ಕಗಳನ್ನು ತುಂಬುವುದರ ನಿರ್ಣಯಕ್ಕೆ ಅರ್ಜಿದಾರರು ಬದ್ಧರಾಗಿರುವುದು.

15) ಸದರಿ ಪ್ರದೇಶದ ಒಳಗೆ ಹೋಗಲು ಮತ್ತು ಹೊರಗೆ ಬರಲು ಸಂಚಾರ ವ್ಯವಸ್ಥೆಯಲ್ಲಿ ಅಡಚಣೆಯುಂಟಾಗದಂತೆ ವ್ಯವಸ್ಥೆ ಕಲ್ಪಿಸುವುದು, ವಾಹನ ತಪಾಸಣೆಗೆ ಮತ್ತು ಭದ್ರತಾ ವ್ಯವಸ್ಥೆಯನ್ನು ಅಳವಡಿಸಿದಲ್ಲಿ ಸ್ವತ್ತಿನ ಒಳಭಾಗದಲ್ಲಿ ನಿರ್ವಹಿಸುವುದು.

16) ಅಗ್ನಿಶಾಮಕ ಇಲಾಖೆ, ವೈಮಾನಿಕ ಇಲಾಖೆ, ಸ್ಥಳೀಯ ಸಂಸ್ಥೆ, ಬೆಸ್ಕಾಂ ಹಾಗೂ ಕೆ.ಎಸ್.ಪಿ.ಸಿ.ಬಿ. ಮಂಡಳಿ/ಇಲಾಖೆಗಳ ನಿರಾಕ್ಷೇಪಣಾ ಪತ್ರಗಳನ್ನು ಯೋಜನಾ ಪ್ರಾಧಿಕಾರವು ಪಡೆದು ಕಟ್ಟಡ ನಕ್ಷೆಗಳಿಗೆ ಮಂಜೂರಾತಿ ನೀಡುವುದು.

17) ಅರ್ಜಿದಾರರು ಉದ್ದೇಶಿಸಿರುವ ಜಮೀನುಗಳಲ್ಲಿ ಸರ್ಕಾರಿ ಅಥವಾ ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ ಅಂತಹ ಸಂದರ್ಭದಲ್ಲಿ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಅನುಮೋದಿತ ಅಭಿವೃದ್ಧಿ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ.

18) ವಸತಿ ಉಪಯೋಗದ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದನೆ ಸಂಬಂಧ ಜಮೀನುಗಳ ಮಾಲೀಕತ್ವದ ಬಗ್ಗೆ ಅರ್ಜಿದಾರರು ತಪ್ಪು ಮಾಹಿತಿ/ದಾಖಲಾತಿ ನೀಡಿದ್ದಲ್ಲಿ ಅಭಿವೃದ್ಧಿ ಯೋಜನಾ ನಕ್ಷೆಯ ಅನುಮೋದನೆಯು ತನ್ನಿಂತಾನೇ ರದ್ದಾಗುತ್ತದೆ.

19) ವಸತಿ ಉಪಯೋಗದ ಅಭಿವೃದ್ಧಿ ಯೋಜನೆಯಲ್ಲಿನ ಘನತ್ಯಾಜ್ಯಗಳನ್ನು ಪ್ಲಾಸ್ಟಿಕ್ ಮತ್ತು ಇತ್ಯಾದಿಯಾಗಿ ವಿಂಗಡಿಸಿ, Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು.



E-mail :dpa.dbpura2018@gmail.com Website : www.doddaballapur.tpa.gov.in

20) ನೈಸರ್ಗಿಕವಾಗಿ ಹರಿಯುವ ನದಿ/ಹಳ್ಳ/ಕೆರೆ/ನಾಲಾ ಮುಂತಾದವುಗಳಿಗೆ ವಿನ್ಯಾಸದ ಮಲೀನ ನೀರನ್ನು ಬಿಡಬಾರದು. ನಾಲಾ ಪ್ರದೇಶಗಳಲ್ಲಿ ರಸ್ತೆ ಪರಿಚಲನೆಯನ್ನು ಮುಂದುವರಿಸುವಾಗ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದು ಕಲ್ವರ್ಟ್ ನಿರ್ಮಾಣ ಮಾಡತಕ್ಕದ್ದು, ಹಾಗೂ ನೀರಿನ ಹರಿವೆಗಾಗಿ ಯಾವುದೇ ಅಡಚಣೆ ಮಾಡತಕ್ಕದ್ದಲ್ಲ, ಹಾಗೂ ಸೂಕ್ತ ಡ್ರೈನೇಜ್ ನಿರ್ಮಿಸಿ ಸಂರಕ್ಷಿಸತಕ್ಕದ್ದು, ಹಾಗೂ ಯಾವುದೇ ಒತ್ತುವರಿ ಮಾಡತ್ತಕ್ಕದ್ದಲ್ಲ. ಸರ್ಕಾರದ ಅಧಿಸೂಚನೆ ಸಂ. ಯುಡಿಡಿ15ಟಿಟಿಪಿ2015, ದಿನಾಂಕ: 21/04/2020 ರ ರೀತ್ಯ ಜಲಪ್ರದೇಶಗಳ ಬಫರ್ ಜಾಗದಲ್ಲಿ water pumping stations, Walking tracks, Play fields without any building constructions, cycling tracks & Parks ಗಳನ್ನು ಮಾತ್ರ ಅಭಿವೃದ್ಧಿಪಡಿಸತಕ್ಕದ್ದು.

21) ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರವು ವಿಧಿಸುವ ಇತರೆ ಷರತ್ತುಗಳಿಗೆ ಬದ್ಧರಾಗಿರುವುದು.

ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಬಿವೃದ್ಧಿ ಕಾಮಗಾರಿಯನ್ನು ಕೈಗೊಂಡಲ್ಲಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 15(4) ರಂತೆ ಕ್ರಮ ಕೈಗೊಳ್ಳಲು ಅವಕಾಶ ಇರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.

18/12/22

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರ,
ದೊಡ್ಡಬಳ್ಳಾಪುರ.

18/12

ರವರಿಗೆ,

ಶ್ರೀ ಮಾರೇಗೌಡ ಬಿನ್ ಗೋವಿಂದಪ್ಪ, ಶ್ರೀಮತಿ ಕೋಮಲಕೃಷ್ಣರೆಡ್ಡಿ ಕೊಂ ಕೃಷ್ಣಾರೆಡ್ಡಿ,
ಶ್ರೀ ಮಂಜುನಾಥ ಬಿನ್ ಮಾರೇಗೌಡ, ಶ್ರೀ ಎ.ಎಂ. ನಾಗರಾಜ್ ಬಿನ್ ಮಾರೇಗೌಡ,
ಶ್ರೀ ಕೃಷ್ಣಾರೆಡ್ಡಿ ಬಿನ್ ಲೇಟ್॥ ಮುನಿಶಾಮಿರೆಡ್ಡಿ,
ಶ್ರೀ ಭಾರ್ಗವರಾಜು ದೊಮ್ಮರಾಜು ಬಿನ್ ರಾಮಭದ್ರರಾಜು,
ಶ್ರೀ ಎಸ್. ಮಹೇಶ್‌ಕುಮಾರ್‌ರೆಡ್ಡಿ ಬಿನ್ ಎಸ್. ರೆಡ್ಡಪ್ಪರೆಡ್ಡಿ,
ಶ್ರೀ ಕೊಂಡಸಾನಿ ಗಿರೀಶ್‌ಕುಮಾರ್‌ರೆಡ್ಡಿ ಬಿನ್ ಕೊಂಡಸಾನಿ ಮದನ್‌ಮೋಹನ್‌ರೆಡ್ಡಿ
ಶ್ರೀಮತಿ ಪ್ರಸನ್ನಲಕ್ಷ್ಮಿ ಯರಟಪಲ್ಲಿ ಬಿನ್ ಶಿವಕುಮಾರರೆಡ್ಡಿ ಯರಟಪಲ್ಲಿ
ಶ್ರೀ ಶಿವಕುಮಾರರೆಡ್ಡಿ.ವೈ ಬಿನ್ ಗೋಪಾಲರೆಡ್ಡಿ ಯರಟಪಲ್ಲಿ
ಅದ್ದೆವಿಶ್ವನಾಥಪುರ ಗ್ರಾಮ, ಯಲಹಂಕ ತಾಲ್ಲೂಕು, ಬೆಂಗಳೂರು.